**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-1**

**ಸಂಖ್ಯೆ:ಸಿ1(6) ಜಿ.ತಾ.ದೈ.ಶಿ.ಪ್ರ /11 /2017-18** **ದಿನಾಂಕ.08-08-2017**

**ಸುತ್ತೋಲೆ**

**ವಿಷಯ:-** ಕೆ. ಸಿ. ಎಸ್. ಅರ್ ನಿಯಮ-68 ಅಡಿಯಲ್ಲಿ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡುವಾಗ ಅನುಸರಿಸಬೇಕಾದ ಕಾರ್ಯವಿಧಾನ

**ಉಲ್ಲೇಖ:-** ಅಧ್ಯಕ್ಷಕರು ಕರ್ನಾಟಕ ರಾಜ್ಯ ಸರ್ಕಾರಿ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಸಂಘ (ರಿ) ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ ಯಲಹಂಕ ಬೆಂಗಳೂರು ಉತ್ತರ ತಾಲ್ಲೂಕು ಬೆಂಗಳೂರು ರವರ ಮನವಿ ದಿನಾಂಕ.10/7/2017

&&&

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಮುಂತಾದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಬಡ್ತಿ, ವರ್ಗಾವಣೆ,ನಿವೃತ್ತಿ ಮುಂತಾದ ಕಾರಣಗಳಿಂದ ಹುದ್ದೆ ತೆರವಾದಾಗ ಸದರಿ ಹುದ್ದೆಗೆ ವರ್ಗಾವಣೆಗೆ ಅಥವಾ ಬಡ್ತಿಯ ಮೂಲಕ ಖಾಯಂ ನೇಮಕಾತಿ ಮಾಡುವವರೆಗೆ ಅಡಳಿತಾತ್ಮಕ ಹಿತದೃಷ್ಟಿಯಿಂದ ಕೆ. ಸಿ. ಎಸ್. ಅರ್ ನಿಯಮ-68 ರ ಅಡಿಯಲ್ಲಿ ಬೇರೊಬ್ಬ ಅಧಿಕಾರಿಯನ್ನು ತಾತ್ಕಾಲಿಕವಾಗಿ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡಬೇಕಾಗಿರುವುದು ಅನಿವಾರ್ಯ ಕ್ರಮವಾಗಿದೆ. ಇಂತಹ ತಾತ್ಕಾಲಿಕ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡುವಾಗ ಆಯಾ ವೃಂದದ ಜೇಷ್ಟತಾನುಸಾರ ಹಿರಿಯ ಅಧಿಕಾರಿಯನ್ನು ಹೆಚ್ಚುವರಿ ಪ್ರಭಾರದಲ್ಲಿಡಬೇಕಾದುದು ಸಾಮಾನ್ಯ ನಿಯಮ. ಆದರೆ ಇಲಾಖೆಯಲ್ಲಿ ಅನೇಕ ವೇಳೆ ನಿವೃತ್ತಿ, ಬಡ್ತಿ ಮತ್ತು ವರ್ಗಾವಣೆಯ ಕಾರಣದಿಂದ ಪ್ರಭಾರ ವಹಿಸಿ ಬಿಡುಗಡೆ ಹೊಂದಬೇಕಾದ ಅಧಿಕಾರಿಗಳು ತಮ್ಮ ಮನಸೋ ಇಚ್ಚೆಯಂತೆ ಕೆಳವೃಂದದ ಹಾಗೂ ಜೇಷ್ಟತೆಯಲ್ಲಿ ಅತ್ಯಂತ ಕಿರಿಯರಿರುವ ಅಧಿಕಾರಿಗೆ ಪ್ರಭಾರ ವಹಿಸಿಕೊಟ್ಟು ಅಡಳಿತದಲ್ಲಿ ಗೊಂದಲವುಂಟು ಮಾಡಿದ ಅನೇಕ ನಿದರ್ಶನಗಳಿವೆ. ಅದ್ದರಿಂದ ಯಾವುದೇ ಹುದ್ದೆಗೆ ಕೆ. ಸಿ. ಎಸ್. ಅರ್ ನಿಯಮ-68 ರ ಅಡಿಯಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡಬೇಕಾದ ಸಂದರ್ಭದಲ್ಲಿ ಈ ಕೆಳಕಂಡ ಮಾರ್ಗಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ.

1] ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಹುದ್ದೆಯು ಕಾರಣಾಂತರದಿಂದ ತೆರವಾದಾಗ ಜಿಲ್ಲೆಯಲ್ಲಿನ ಸೇವಾ ಜೇಷ್ಟತೆಯಲ್ಲಿ ಹಿರಿತನ ಹೊಂದಿರುವ ತಾಲ್ಲೂಕು ಪರೀವಿಕ್ಷಕರನ್ನು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಹುದ್ದೆಗೆ ಪ್ರಭಾರದಲ್ಲಿರಿಸಲು ಸಂಬಂಧಪಟ್ಟವರು ಕ್ರಮಕೈಗೊಂಡು ಆಯುಕ್ತರು/ಅಪರ ಆಯುಕ್ತರಿಗೆ ವರದಿ ಸಲ್ಲಿಸುವುದು.

2] ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳ ಹುದ್ದೆಯು ಕಾರಣಾಂತರದಿಂದ ತೆರವಾದಾಗ ಜಿಲ್ಲಾ ಕೇಂದ್ರದ ತಾಲ್ಲೂಕಾಗಿದ್ದಲ್ಲಿ ಡಯಟ್‌ನ ದೈಹಿಕ ಶಿಕ್ಷಣ ಉಪನ್ಯಾಸಕರನ್ನು ಪ್ರಭಾರದಲ್ಲಿರಿಸುವುದು. ಜಿಲ್ಲಾ ಕೇಂದ್ರದ ತಾಲ್ಲೂಕಲ್ಲದ ಸಂದರ್ಭದಲ್ಲಿ ಆಯಾ ತಾಲ್ಲೂಕಿನ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ವೃಂದದಲ್ಲಿ ಜೇಷ್ಠರಾದವರನ್ನು ಪ್ರಭಾರದಲ್ಲಿ ಇರಿಸುವ ಬಗ್ಗೆ ಕ್ರಮಕೈಗೊಂಡು ಆಯುಕ್ತರು/ಅಪರ ಆಯುಕ್ತರಿಗೆ ವರದಿ ಸಲ್ಲಿಸುವುದು.

ಮೇಲಿನ ಮಾರ್ಗಸೂಚಿಯಂತೆ ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು ಕಟ್ಟುನಿಟ್ಟಾಗಿ ಕ್ರಮವಹಿಸಲು ಸೂಚಿಸಿದೆ.

[ಎಸ್.ಕಾತ್ಯಾಯನಿ/ದೇವಿ]
ಜಂಟಿ ನಿರ್ದೇಶಕರು(ಅಡಳಿತ)

**ಇವರಿಗೆ,**

1] ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಡಳಿತ),ಮತ್ತು ಡಯಟ್ ಪ್ರಾಂಶುಪಾಲರು ಹಾಗೂ (ಅಭಿವೃದ್ಧಿ) ಹಾಗೂ ಪದನಿಮಿತ್ತ ಉಪನಿರ್ದೇಶಕರು

2] ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು/ತಮ್ಮ ಅಧೀನದಲ್ಲಿ ಬರುವ ಎಲ್ಲಾ ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳಿಗೆ ಪ್ರತಿಗಳನ್ನು ಕಳುಹಿಸುವುದು. 3]ಕಛೇರಿ ಪ್ರತಿ.